ಹಿಡ್ದಾಂಗೆ ಆಯ್ದು' ಎನ್ನುತ್ತ ಕುಂಟುವ ಅವಳ ಅಬ್ಬೆ ಪುಟ್ಟತ್ತೆಯ ಸಂಗ್ರಿಗೆ ಪಡಿ ಮಾಡು ಸಾಲಿಂದ ಬಂದು ಕಿಟಕಿಯ ತಳಿಯಿಂದ ಇಣುಕಿದಳು. ಹಣ್ಣಣ್ಣು ಮಂಡೆಯ ಬೀಗು ಮೊಕದ ಬರೀ ಸೊಂಟವೇ ಆಗಿ ಬಿಟ್ಟ ಪುಟ್ಟತ್ತೆಯ ಬೃಹತ್ ವಕ್ರಾಕೃತಿಯನ್ನು ಗಮನಿಸಿದ ಬಾಬಣ್ಣ, "ಮಗಳ ಇಟ್ಕಂಡು ಚಲೊ ಮಾಡಿದ್ರಿ. ಎಲ್ಲ ಮರ್ತು ಹೋಗು ತನಕ ಮನೇಲಿ ಜನ ಬೇಕು" ಎಂದ. "ಬಾಬಣ್ಣಂಗೆ ಕೂತ್ಕಂಬುದಕ್ಕೆ ಹೇಳೆ; ಚಹಾಕ್ಕೆ ನೀರಿಡ್ಲಾ?'' ಎಂದು ಒಯ್ಯಾರದಲ್ಲಿ ಮಾಲತಿಗೆ ಉಪಚರಿಸಲು ಹೇಳಿ, "ತಿರುಮಲನೇ ಹುಬೇಹೂಬು ಬಾಗ್ಲಲ್ಲಿ ನಿಂತ್ಕಂಡಾಂಗೆ ಕಾಣ್ತು ಅಬೆ, ನೋಡು" ಎಂದು ದೇವಕಿ ಖೇದದ ದೊಡ್ಡ ಉಸಿರು ಬಿಟ್ಟಳು. "ಆ ದೇವ್ರಿಂಗೆ ಎನ್ನ ತಕಂಡು ಹೋಪುದಕ್ಕೆ ಮರ್ತು ಹೋಯಿದು ಬಾಬಣ್ಣ. ಇನ್ನೂ ಎಂಥೆಂಥ ಪಾಪ ಈ ಕಣ್ಣಲ್ಲಿ ನೋಡೂದು ಈ ಜನ್ಮದಲ್ಲಿ ಬರ್ಕಂಡಿದ್ದ ಏನಾ" ಪುಟ್ಟತ್ತೆ ಮತ್ತೊಂದಾವರ್ತಿ ಅತ್ತಳು. 'ಅದೆಲ್ಲ ಮೇಲಿನವನ ಮರ್ಜಿಗೆ ಬಿಟ್ಟಿದ್ದು' ಎಂಬರ್ಥದಲ್ಲಿ ಸನ್ನೆ ಮಾಡಿದ. ಸೊಂಟದ ಸನಿಹ ಪ್ಯಾಂಟಿನ ಮೇಲೆ ಬಿಗಿ ಟಿ ಶರ್ಟನ್ನು ಕೆಳಗೆಳೆಯುತ್ತ ನಾಯಿ ಜತೆಗೆ ಬಂದ ಸಂಪದಾಳನ್ನು ನೋಡಿ ಬಾಬಣ್ಣ, "ತಂಗಿ, ನಿಮ್ಮನೆ ರಸ್ತೇಲಿ ಸ್ಕೂಟಿ ಹುಷಾರಾಗಿ ಹೊಡಿ ಹಾಂ" ಎಂದು ಸಲಹೆ ನೀಡಿದ.

ಅಂಗಳಕ್ಕೆ ಬಂದು, "ಚಾಪಾಕ್ಕೆಲ್ಲ ಪುರಸೊತ್ತಿಲ್ಲ ಈಗ. ಮಾಲತಕ್ಕ ಇಲ್ಲಿ ಬಾ." ಬಾಬಣ್ಣ ಕರೆದ ಅವಸರದಲ್ಲಿ. ಅವನು ಒಳಗುಟ್ಟು ಮಾಡುವಂತೆ ಮಾತಾಡುವುದು ಅವಳಿಗೆ ಸರಿ ಅನಿಸದಿದ್ದರೂ ಹೋದಳು. "ಸಾಗರದ ಒಂದು ಪಾರ್ಟಿ ಜಮೀನು ನೋಡ್ತಾ ಇದ್ದಾರೆ. ಅವರ ಕರ್ಕಂಡು ಬರಬೌದೊ." ಅವಳ ತಳಮಳದ ಜೀವದಿಂದ ತಕ್ಷಣ ದನಿ ಹೊರಡಲಿಲ್ಲ. ಗರ ಬಡಿದ ನಿಸ್ತೇಜ ಕಣ್ಣುಗಳು ಏನೋ ಹೇಳಲು ಸ್ಪಂದಿಸಿದವು; ಮಾತು ಮೂಡದೆ ಹಣಕಿದಳು. "ಮನಸು ಗಟ್ಟಿ ಮಾಡ್ಕ. ವ್ಯವಹಾರಕ್ಕೆ ಗಡಿಬಿಡಿ ಇಲ್ಲಾ ತಿಳಿತಾ. ನಾನೂ ವಿಚಾರ ಮಾಡ್ತೇನೆ" ಎಂದು ಹೊರಟು ಹೋದ.

ಬಾಬಣ್ಣ ಮತ್ತಿಮರದ ಅಡಿಯಲ್ಲಿ ನಿಲ್ಲಿಸಿದ ಬುಲೆಟ್ ಬೈಕ್ ಹತ್ತಿ ಹೋದ. ಅದರ ಸದ್ದು ಕಾಡಿನ ಅಂತಃಕರಣಕ್ಕೆ ಹೊಡೆದ ಗುಂಡೇಟಿನಂತಿತ್ತು. ಮುಸ್ಸಂಜೆಯಷ್ಟೆ ಅವನ ಆಗಮನ ನಿಗೂಢವಾಗಿರುತ್ತಿತ್ತು. ಮರದ ಮೇಲಿನ ಬೆಳಕನ್ನು ಕಳಿಸಿ, ನೆರಳನ್ನಿಳಿಸಿ, ಹಕ್ಕಿಗಳನ್ನಿ ಹಾರಿಸಿ, ಗಾಳಿಯನ್ನು ನಿಲ್ಲಿಸಿ, ಜೇನ್ನೊಣಗಳ ಝೇಂಕಾರವನ್ನು ಕೆಂಬಾನಿನ ದಿಗಂತದಾಚೆ ಸಾಗಹಾಕಿ, ಭಯಂಕರ ನಿಶ್ಯಬ್ದವನ್ನು ಅಟ್ಟಿಸಿಕೊಂಡು ಬರುವ ಸಂಧಿಪುರುಷನಂತೆ ಬಾಬಣ್ಣ ಪುಟ್ಟತ್ತೆಗೆ ಕಂಡು ಹೆದರಿಕೆಯಾಗುತ್ತದೆ. "ತಾನೇ ಈ ಮನೆ ಯಜಮಾನನಾಂಗೆ ಧರ್ತಿ ತೋರಸ್ತಾ!" ದೇವಕಿ ಒಂದು ನಮೂನೆ ಮುಖ ಮಾಡಿದಳು. "ಕುಣೆಯವು ಇದ್ರೆ ಕುಣೆಸ್ತೊ ಬೇಕಾದಾಂಗೆ" ಪುಟ್ಟತ್ತೆ ವಾರೆಪಾರೆ ಮೇಲೆ ದಬಾಯಿಸಿದಳು.

"ಈ ಬಾಬಣ್ಣಂಗೆ ಸತಾಯಿಸಿದ್ದು ಹಂಬ್ಲ ಅವ್ವು. ಆನು ತಿರುಮಲ ಸಾಲೆಗೆ ಹೋಪಾಗ ಮಾಡ್ತಿದ್ದ ಕಿತಾಪತಿ. ಮಧ್ಯಾನ ಉರಿ ಬಿಸಲಲ್ಲಿ ಬಾಬಣ್ಣ ನಮ್ಮನೆಗೆ ಬಂದಿದ್ದ. ಉಂಡು ಕೈ ತೊಳ್ದದ್ದು ಇನ್ನೂ ಒಣಗಿತ್ತಿಲೆ. ಬಂದಾ ನೋಡು ಈ ಮಲಾಮತಿ. ಅಬ್ಬೆ ಅನ್ನದ ಬೊಡ್ಡೆ ನೋಡಿದ್ರೆ ಇದ್ದದ್ದು ನಾಕು ತುತ್ತು. ಏರುತುಂಡೆ ಬಾಬಣ್ಣ ಅಂವ. ಆನೇ ಬಡಸ್ತೆ ಎಂದೆ. ಮೊದಲನೆ ಸರ್ತಿ ಬಾಳೇಲಿ ಅನ್ನ ಹಾಕಿದ್ದೆ ತಡ 'ಬಾಬಣ್ಣನ ಹೊಟ್ಟೆ ಅಷ್ಟೆಂತಕ್ಕೆ ಸಣ್ಣಕಾಯ್ದು ಊಟಾ ಕಡಿಮೆ ಮಾಡಿದ್ಯಾ ಹ್ಯಾಂಗೆ' ಎಂದೆ. 'ಜೀವ ಹಗೂರಿರ್ತದೆ; ಕಡಿಮೆ ಉಂಡ್ರೆ ಆಯುಷ್ಯ ಹೆಚ್ಚು' ಎಂದು ಪೊಕ್ಕೆ ಹೊಡ್ದು ಹಾಕಿದ ಅನ್ನದ ಶೇಷ ಉಳಿಸಿ ಎದ್ದು ಹೋದ. ಬೊಡ್ಡೇಲಿ ಅನ್ನ